Village Panchayats in Dharwar District

170. Sri B. G. BANAKAR (Hirekerur)—

Will the Minister for Rural Development and Social Welfare be pleased to state:—

(*a*) the total number of Village Accountants appointed as *ex-Officio* Secretaries of the Panchayats in Dharwar District as per Rule 8-A of the Karnataka General Service (Revenue Subordinate Branch), Village Accountant's (Recruitment Rules 1970) as on 31-3-1974 ;

(*b* the total number of Village Accountants who are required to work in Panchayats as per Section 77 of the Karnataka Village Panchayats and Local Boards Act, 1959 and the Karnataka Panchayat Taxes and Fees Rules, 1960 in Dharwar District as on 31-3-1974 ;

(*c*) the total amount of tax recovered by the Panchayats in Dharwar District during the last three years as on 31-3-1974 ;

(*d*) the total amount of Panchayats tax due as on 31-3-1974 in Dharwar District ;

(*e*) the total Number of Panchayats having the revenue of more than Rs. 12,000 in Dharwar District ?

Sri N. RACHAIAH (Minister for Rural Development and Social Welfare).—

(*a*) 265.

(*b*) 272.

(*c*) 1971-1972 ... 20,16,960.44
1972-1973 ... 19,62,799.74
1973-1974 ... 26,53,647.11

(*d*) Rs. 37,41,114.44

(*e*) 79.

ಶ್ರೀ ಬಿ. ಜಿ. ಬಣಕಾರ್.—ಇಲ್ಲಿ ಧಾರವಾಡ ಜಿಲ್ಲೆಯಲ್ಲಿ ಸುಮಾರು 272 ಜನ ಗ್ರಾಮಲೆಕ್ಕಗರು ಎಕ್ಸ್ ಅಫಿಷಿಯೋ ಪಂಚಾಯತ್ ಸೆಕ್ರೆಟರೀಸ್ ಆಗಿ ಕೆಲಸಮಾಡುತ್ತಿದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಬಹು ಪಾಲು ಅವರ ಪಂಚಾಯತ್ ವರ್ಕನ್ನು ತೀವ್ರವಾಗಿ ಮಾಡುತ್ತಾ ಇಲ್ಲ. ಹೀಗೆ ಕೆಲಸಮಾಡುತ್ತಿರುವಂತಹವರ ಮೇಲೆ ಕಟುವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತಾರೆಯೇ ?

† ಶ್ರೀ ಎನ್. ರಾಚಯ್ಯ.—ಈಗಾಗಲೇ ಅಂತಹ ಆದೇಶವನ್ನು ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಅಭಿಪ್ರಾಯ ಪಡುವ ಹಾಗೆ ಸೂಕ್ತ ಆದೇಶವನ್ನು ಸರ್ಕಾರ ಕಳಿಸಿದೆ.

ಶ್ರೀ ಬಿ. ಜಿ. ಬಣಕಾರ್.—ಧಾರವಾಡ ಜಿಲ್ಲೆಯಲ್ಲಿ ಸುಮಾರು 12 ಸಾವಿರ ರೂಪಾಯಿ ಗಳಿಗೂ ಹೆಚ್ಚು ಆದಾಯವನ್ನು ಹೊಂದಿರುವ ಪಂಚಾಯತಿಗಳು 79 ಇವೆ. ಈ 79 ಪಂಚಾಯತಿ ಗಳಿಗೂ ಇವತ್ತಿನವರೆಗೂ ಪ್ರತ್ಯೇಕವಾದಂಥ ಕಾರ್ಯದರ್ಶಿಗಳನ್ನು ನೇಮಿಸಿಲ್ಲ. ಈ ಬಗ್ಗೆ ಆದಷ್ಟು ಬೇಗ ಕಾರ್ಯದರ್ಶಿಗಳನ್ನು ನೇಮಿಸಲಿಕ್ಕೆ ಆದೇಶವನ್ನು ಕೊಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಇತ್ತೀಚೆಗೆ ಕಳೆದ ವಾರ ಧಾರವಾಡಕ್ಕೆ ಹೋಗಿದ್ದೆ. ಅಲ್ಲಿಯ ಜಿಲ್ಲಾಧಿಕಾರಿಗಳನ್ನು ಕರೆಸಿ 12 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉತ್ಪಾದನೆ ಬರತಕ್ಕ ಪಂಚಾಯತಿಗಳಿಗೆ ಸ್ವತಂತ್ರವಾಗಿ ಇರತಕ್ಕಂಥ ಕಾರ್ಯದರ್ಶಿಗಳನ್ನು ನೇಮಿಸಬೇಕೆಂದು ಆದೇಶ ಕೊಟ್ಟಿದ್ದೇನೆ. ಈಗಾಗಲೇ ಸಂಬಂಧಪಟ್ಟ ನೌಕರರ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡುತ್ತಿದ್ದಾರೆ. ಇದಾದ ತಕ್ಷಣ ನೇಮಕಮಾಡುತ್ತಾರೆ ಎಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೆಲವು ವಿಲೇಜ್ ಅಕೌಂಟೆಂಟ್‌ಗಳು ಏನು ಇದ್ದಾರೆ ಅವರು ವಸೂಲು ಮಾಡುವ ಹಣ ಅವರ ಸಂಬಳದಷ್ಟು ಸಹ ವಸೂಲುಮಾಡುತ್ತಾ ಇಲ್ಲ. ಇಂತ ಹವರನ್ನು ನೇಮಕ ಮಾಡಿದಾರೆ. ಅವರು ಕೆಲಸಕ್ಕೆ ತಕ್ಕ ಹಾಗೆ ಹಣ ವಸೂಲುಮಾಡಿಲ್ಲ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ?

ಶ್ರೀ ಎನ್. ರಾಚಯ್ಯ.—ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಬಿ. ಜಿ. ಬಣಕಾರ್.—ಎಕ್ಸ್ ಆಫಿಷಿಯೋ ಪಂಚಾಯತ್ ಸೆಕ್ರೆಟರೀಸ್‌ಗಳು ಯಾರನ್ನೂ ನೇಮಿಸುತ್ತಾ ಇದ್ದಾರೆ. ಅವರ ಪೈಕಿ ಅನೇಕ ಕಾರ್ಯದರ್ಶಿಗಳಿಗೆ ಇನ್ನೂ ಚಾರ್ಜ್ ಕೊಟ್ಟಿಲ್ಲ. ಈ ಬಗ್ಗೆ ಸೂಕ್ತ ಅಭಿಪ್ರಾಯವನ್ನು ಹೇಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಅಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ಕೊಟ್ಟಿದ್ದೇವೆ. ಈ ವಿಚಾರದಲ್ಲಿ ತೀವ್ರವಾದ ಗಮನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಇನ್ನು ನೇಮಕಮಾಡಬೇಕಾದ ಈ ಕಾರ್ಯದರ್ಶಿಗಳನ್ನು ನೇಮಿಸುವ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ರಾಚಯ್ಯ.—ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಪಿ. ಮುನಿಸ್ವಾಮಿ.—ಈಗ ಇರುವ ವಿಲೇಜ್ ಅಕೌಂಟೆಂಟ್‌ಗಳು ಡೈರೆಕ್ಟಾಗಿ ಪಂಚಾಯತ್ ಕಂಟ್ರೋಲ್‌ನಲ್ಲಿ ಇದ್ದಾರೆಯೇ ಅಥವಾ ರೆವೆನ್ಯೂ ಕಂಟ್ರೋಲ್‌ನಲ್ಲಿ ಇದ್ದಾರೆಯೇ ಹೇಗೆ ? ಅವರು ಕೆಲಸವನ್ನು ಸರಿಯಾಗಿ ಮಾಡಿಲ್ಲ ಎಂದು ತಕರಾರುಗಳು ಬರುತ್ತಾ ಇದೆಯೇ ಹೇಗೆ ?

ಶ್ರೀ ಎನ್. ರಾಚಯ್ಯ.—ಎಲ್ಲೆಲ್ಲಿ ಸೂಕ್ತವೋ ಅಲ್ಲಿ ಖಾಯಂ ಆಗಿ ರೆವೆನ್ಯೂ ಇಲಾಖೆಗೆ ಸೇರಿದಂಥವರನ್ನು ಪಂಚಾಯತಿ ಕಾರ್ಯದರ್ಶಿಯಾಗಿ ನೇಮಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಆ ಒಂದು ಕಾನೂನಿನ ಪ್ರಕಾರ ಅವರು ಎರಡು ಕಡೆಯಲ್ಲೂ ಕೆಲಸಮಾಡತಕ್ಕ ವ್ಯವಸ್ಥೆ ಇದೆ. ಇದನ್ನು ತಪ್ಪಿಸಬೇಕು. ಸ್ವತಂತ್ರವಾಗಿ ಅಲ್ಲಿ ಕಾರ್ಯದರ್ಶಿಗಳು ಇದ್ದರೆ ಪಂಚಾಯತಿ ಕಾರ್ಯಕ್ರಮಗಳನ್ನು ಮತ್ತು ಅವುಗಳ ಯೋಜನೆಗಳನ್ನು ಯಶಸ್ವಿಯಾಗಿ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಸರ್ಕಾರ ಇದನ್ನು ಯೋಚನೆ ಮಾಡುತ್ತಿದೆ.

ಶ್ರೀ ಅನಿವಾಳ್ ನಂಜಪ್ಪ.—ಈ ಕಾರ್ಯದರ್ಶಿಗಳು ಪಂಚಾಯತ್ ಕಾರ್ಯಾಲಯಗಳಲ್ಲಿ ಮುಲಗುಳು ರೂಮು ಇಲ್ಲದೆ ತಾಲ್ಲೂಕು ಕೇಂದ್ರುದಲ್ಲಿ ರೂಮು ಮಾಡಿಕೊಂಡು ತಮ್ಮ ಕಾಲ ಕಳೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತಾರೆಯೇ ?

Sri N. RACHAIAIH.—It is a suggestion for action.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ಗ್ರಾಮ ಲೆಕ್ಕಿಗರು ಸರಿಯಾಗಿ ಕೆಲಸಮಾಡುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆಂದು ಹೇಳಿದ್ದೀರಿ. ಒಂದು ಕಡೆ ತಹಶೀಲ್ದಾರರವರಿಗೂ ಕಂದಾಯ ವಸೂಲು ಮಾಡತಕ್ಕ ಕೆಲಸವನ್ನು ವಹಿಸಿದ್ದಾರೆ ಇನ್ನೊಂದು ಕಡೆ ಬಿ.ಡಿ.ಓ. ಅವರಿಗೆ ಈ ಕೆಲಸವನ್ನು ವಹಿಸಿದ್ದಾರೆ. ಈ ರೀತಿ ಇರುವುದರಿಂದ ಗ್ರಾಮಲೆಕ್ಕಿಗರು ಎರಡು ಕಡೆ ಕೆಲಸ ಮಾಡುವುದನ್ನು ಆದಷ್ಟು ಬೇಗ ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಆಗಲೇ ಹೇಳಿದ್ದೇನೆ.